# ಹೇಮಾ ಭ್ರಮೆಯಲ್ಲಿ ಗಿರಿಧರ

ನಾನು ಏಳನೆಯ ತರಗತಿಯಲ್ಲಿದ್ದಾಗ ನನ್ನ ಪ್ರೀತಿಯ ಅಜ್ಜಿ ತೀರಿ ಹೋದರು. ನನಗೆ ಅತೀವ ದುಃಖವಾಯಿತು. ಅಂದೂ ಕೂಡ ಅಲ್ಲಿ ದೊಡ್ಡಪ್ಪನನ್ನು ನೋಡಲು ಹೆದರಿಕೆಯಾಗಿ ಎಲ್ಲಾ ಕಾರ್ಯಗಳು ಮುಗಿಯುವವರೆಗೂ ಅಮ್ಮನ ಕೈಯ್ಯನ್ನು ಬಿಗಿಯಾಗಿ ಹಿಡಿದುಕೊಂಡು ಅವಳ ಜೊತೆಯಲ್ಲಿಯೇ ಇದ್ದೆ. ಅದಾದ ನಂತರ ಅಮ್ಮ ನಮ್ಮ ಮನೆಯಲ್ಲಿ ತಾತ ಮತ್ತು ಅಜ್ಜಿಯ ಫೋಟೊ ಇರಿಸಿ ಪ್ರತಿವರ್ಷವೂ ಎಲ್ಲಾ ನೆಂಟರಿಸ್ಟರು, ಆಳುಕಾಳುಗಳನ್ನು ಕರೆದು ಊಟ ಬಡಿಸಿ, ಕೆಲಸಗಾರರಿಗೆಲ್ಲಾ ಹೊಸ ಬಟ್ಟೆ ಬರೆ ನೀಡಿ ಹಿರಿಯರಿಗೆ ಎಡೆ ಇಡುವ ಮಹಾನವಮಿ ಹಬ್ಬವನ್ನು ಸ್ವತಂತ್ರವಾಗಿ ಆಚರಿಸತೊಡಗಿದಳು. ಅಜ್ಜಿ ಇದ್ದಾಗ

